8)	ಮೈಸೂರು	-	53
9)	ಚಾಮರಾಜನಗರ	-	30
10)	ಮಂಡ್ಯ	-	20
11)	ಹಾಸನ	-	48
12)	ಚಿಕ್ಕಮಗಳೂರು	-	47
13)	ಕೊಡಗು	-	11
14)	ದಕ್ಷಿಣ ಕನ್ನಡ	-	77
15)	ಉಡುಪಿ	-	74
16)	ಬೆಳಗಾವಿ	-	70
17)	ವಿಜಾಪುರ	-	ಇಲ್ಲ
18)	ಬಾಗಲಕೋಟೆ	-	27
19)	ಧಾರವಾಡ	-	07
20)	ಗದಗ	-	19
21)	ಹಾವೇರಿ	-	24
22)	ಕಾರವಾರ	-	05
23)	ಗುಲ್ಬರ್ಗಾ	-	12
24)	ಬೀದರ್	-	18
25)	ರಾಯಚೂರು	-	31
26)	ಕೊಪ್ಪಳ	-	05
27)	ಬಳ್ಳಾರಿ	-	09

ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ

4853 - ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ದಿನಗಳಲ್ಲಿ ತೆಂಗು, ಅಡಿಕೆ ಇತರೆ ಕೃಷಿ ಉತ್ಪನ್ನಗಳ ಬೆಲೆ ಬಹಳ ಇಳಿಮುಖವಾಗಿದ್ದು, ಕೃಷಿಕರಿಗೆ ಪ್ರೋತ್ಸಾಹ ಕೊಡಲು ಬೆಂಬಲ ಬೆಲೆ ನಿಗಧಿಪಡಿಸಲು ಸರ್ಕಾರ ಆಲೋಚಿಸಿದೆಯೆ?

ಆ) ಪಾಮೊಲಿನ್ ಎಣ್ಣೆಯ ಆಮದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಇ) ಹಾಗಾದಲ್ಲಿ ಯಾವ ಉತ್ಪನ್ನಗಳಿಗೆ ಬೆಂಬಲ ಬೆಲೆ ಕೊಡಲು ನಿರ್ಧರಿಸಿದೆ? ಬೆಂಬಲ ಬೆಲೆ ಪ್ರಮಾಣವೆಷ್ಟು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು 17 ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ತೆಂಗು ಮತ್ತು ಅಡಿಕೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಜೊತೆಗೆ ಒಣ ಕೊಬ್ಬರಿ ಮತ್ತು ತಾಳೆ ಹಣ್ಣಿಗೆ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

ಆ) ಪಾಮೊಲಿನ್ ಎಣ್ಣೆ ಆಮದು ಶುಲ್ಕ ಏರಿಸಿ ಹೆಚ್ಚಿನ ಆಮದಾಗುವುದನ್ನು ತಪ್ಪಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ.

ಇ) 2000-2001ನೇ ಋತುವಿನಲ್ಲಿ 17 ಮುಂಗಾರು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಕೊಡಲು ನಿರ್ಧಸಿದೆ. ಬೆಳೆಗಳು ಮತ್ತು ಬೆಂಬಲ ಬೆಲೆ ಪ್ರಮಾಣ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಬೆಳೆ	ಕನಿಷ್ಠ ಬೆಂಬಲ ಬೆಲೆ (ಪ್ರತಿ ಕ್ವಿಂಟಾಲ್‌ಗೆ) ರೂ.
1.	ಭತ್ತ - ಸಾಮಾನ್ಯ	510
2.	ಭತ್ತ - ಗ್ರೇಡ್ ಎ	540
3.	ಮೆಕ್ಕೆ ಜೋಳ (ಮೈಜ್, ಗೋವಿನಜೋಳ, ಎಫ್‌ಎಕ್ಯೂ	445
4.	ಜೋಳ (ಜಾವರ್)	445
5.	ಸಜ್ಜೆ (ಬಾಜ್ರ)	445
6.	ರಾಗಿ	445
7.	ಅರಹರ (ತುರ್) ತೊಗರಿ	1200
8.	ಹೆಸರು (ಮುಂಗ್)	1200
9.	ಉದ್ದು (ಉರದ್)	1200
10.	ಕಡಲೆಕಾಯಿ (ಸಿಪ್ಪೆಯೊಂದಿಗೆ)	1200
11.	ಸೊಯಾಬೀನ್ ಕಪ್ಪು	775
12.	ಸೊಯಬೀನ್ ಹಳದಿ	865
13.	ಎಳ್ಳು (ಸೇಸಮಮ್)	1300
14.	ಸೂರ್ಯಕಾಂತಿ ಬೀಜ	1170

ಕ್ರಮ ಸಂಖ್ಯೆ	ಬೆಳೆ	ಕನಿಷ್ಠ ಬೆಂಬಲ ಬೆಲೆ (ಪ್ರತಿ ಕ್ವಿಂಟಾಲ್‌ಗೆ) ರೂ.
15.	ಗುರೆಳ್ಳು:ಹುಚ್ಚೆಳ್ಳು	1025
16.	ಹತ್ತಿ	1625
17.	ಹತ್ತಿ. ಹೆಚ್ - 4	1825

ಜೊತೆಗೆ ಒಣಕೊಬ್ಬರಿಗೆ ರೂ. 3500 ಪ್ರತಿ ಕ್ವಿಂಟಾಲ್‌ಗೆ ಮತ್ತು ತಾಳಿಹಣ್ಣಿಗೆ ರೂ. 2750 ಪ್ರತಿ ಟನ್ನಿಗೆ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

ಎನ್.ಜಿ.ಇ..ಎಫ್ ಉದ್ಯೋಗಿಗಳ ಗೃಹ ನಿರ್ಮಾಣ ಸಂಸ್ಥೆ

4854 - ಶ್ರೀ ಹಾಲಪ್ಪ ವಿ.ಬಿ. (ಹಡಗಲಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎನ್.ಜಿ.ಇ.ಎಫ್. ಉದ್ಯೋಗಿಗಳ ಗೃಹ ನಿರ್ಮಾಣ ಸಂಸ್ಥೆಯ ಆಡಳಿತವನ್ನು 1994 ರಲ್ಲಿ ರದ್ದುಮಾಡಿ ವಿಶೇಷ ಅಧಿಕಾರಿಯನ್ನು ನೇಮಿಸಿದ್ದು ನಿಜವೇ? ಅದರಂತೆ 6 ತಿಂಗಳಲ್ಲಿಯೇ ಅಲ್ಲಿ ಚುನಾವಣೆ ನಡೆಸಬೇಕಾಗಿರುವುದು ಸರಿಯೇ? ಸರ್ಕಾರದ ಆದೇಶವನ್ನು ಧಿಕ್ಕರಿಸಿ ಇದುವರೆವಿಗೂ ಚುನಾವಣೆ ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಎನ್.ಜಿ.ಇ.ಎಫ್. ಉದ್ಯೋಗಿಗಳ ಗೃಹ ನಿರ್ಮಾಣ ಸಂಘ ಖರೀದಿಸಿದ ಕುಂದಲಹಳ್ಳಿ (ವೈಟ್‌ಫೀಲ್ಡ್ ಹತ್ತಿರ) ಕೆಂಗೇರಿ ಮತ್ತು ಮಲ್ಲತ್ತಹಳ್ಳಿಯಲ್ಲಿನ 65 ಎಕರೆ ಜಮೀನಿನಲ್ಲಿ ಬಡಾವಣೆ ಮಾಡಿ ಸದಸ್ಯರಿಗೆ ಹಂಚಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಜಮೀನು ಯಾರ ಮಾಲೀಕತ್ವ ಮತ್ತು ವಶದಲ್ಲಿದೆ? ವಿವರ ನೀಡುವುದು?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಹೌದು. ಚುನಾವಣೆಯ್ನು ಆರು ತಿಂಗಳೊಳಗೆ ನಡೆಸಬೇಕಾಗಿತ್ತು. ಆದರೆ ಹಿಂದಿನ ಸಹಕಾರಿ ಸಂಘಗಳ ಕಾಯಿದೆಯಂತೆ ವಿಶೇಷಾಧಿಕಾರಿಗಳ ಅವಧಿಯನ್ನು ವಿಸ್ತರಿಸಿದ್ದರಿಂದ ಚುನಾವಣೆಯನ್ನು ನಡೆಸಿರಲಿಲ್ಲ.

ಉದ್ಭವಿಸುವುದಿಲ್ಲ.

ಆ) ಹೌದು.

ಇ) ಈ ಜಮೀನಿನ ಮಾಲಿಕತ್ವವನ್ನು ಸಂಘವು ಪಡೆದಿರುವುದಿಲ್ಲ.